www.ecourtsindia.com



**MVC 622-23 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ A S D, ವಕೀಲರಿಂದಃ**

ನಾನು ಅಪಘಾತ ವನ್ನು ಕಣ್ಣಾರೆ ನೋಡಿಲ್ಲ. ನನ್ನ ಮಾವ ವೆಂಕಟೇಶ ದೂರು ನೀಡಿರುತ್ತಾರೆ. ನಾನು ದೂರನ್ನು ಓದಿರುವುದಿಲ್ಲ. ಅಪಘಾತ ದ ದಿನದಂದು ವಾಹನ ಖಾಯಂ ನೋಂದಣಿ ಆಗಿರಲಿಲ್ಲ ಅಂದರೆ ಗೊತ್ತಿಲ್ಲ. ಖಾಯಂ ನೋಂದಣಿ ಇಲ್ಲದೆ ರಸ್ತೆ ಮೇಲೆ ವಾಹನ ಚಲಾಯಿಸಿದ್ದರಿಂದ ವಿಮೆ ಪಾಲಿಸಿ ಶರತ್ತುಗಳು ಉಲ್ಲಂಘನೆಯಾಗಿದ್ದರಿಂದ ಎದುರುದಾರ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಗೊತ್ತಿಲ್ಲ. ಆರೋಪಿ ನನ್ನ ತಂದೆ. ನಾನು ಈಗ ಏನು ಕೆಲಸ ಮಾಡುತ್ತಿಲ್ಲ. ನನ್ನ ತಂದೆ ಅಪಘಾತ ಕ್ಕಿಂತ ಪೂರ್ವದಲ್ಲಿ ಗ್ರಾಫಿಕ್ ಡಿಜೈನರ ಅಂತಾ ಕೆಲಸ ಮಾಡುತ್ತಿದ್ದರು. ಈಗ ನನ್ನ ತಂದೆ ಏನೂ ಕೆಲಸ ಮಾಡುವುದಿಲ್ಲ. ನನ್ನ ತಂದೆ ಈಗ ಕೆಲಸ ಮಾಡದೆ ಇರುವ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿರುವುದಿಲ್ಲ. ನನ್ನ ತಂದೆ ಗ್ರಾಫಿಕ್ ಡಿಜೈನರ ಅಂತಾ ಕೆಲಸ ಮಾಡಲು ನಮ್ಮ ಕುಟುಂಬವನ್ನು ನೋಡಿಕೊಳ್ಳುತ್ತಿದ್ದಾರೆ ಅಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ನಮ್ಮ ತಂದೆ ಕೆಲಸ ಮಾಡುತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ.8 ರ ದಾಖಲೆ ನಮ್ಮ ತಾಯಿಯನ್ನು ಶಾಲೆಗೆ ಬಿಡಲು ಹೋಗುತ್ತಿದ್ದಾಗ ನಾನು ಸಂಸ್ಥೆಯೊಂದಿಗೆ ಒಳ್ಳೆಯ ಸಂಬಂಧ ಇರುವುದರಿಂದ ವಿನಂತಿ ಮಾಡಿಕೊಂಡಿದ್ದಕ್ಕೆ ಕೊಟ್ಟಿರುತ್ತಾರೆ. ನಿಪಿ.8 ರ ಪ್ರಾಂಶುಪಾಲರು ಸಹಿ ಮಾಡಿರುತ್ತಾರೆ. ನಿಪಿ.8 ನ್ನು ಹೊರತುಪಡಿಸಿ ಕೆಲಸ ಮಾಡುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ, ಆದರೆ ನಾನು ಹಾಜರಾತಿ ಪುಸ್ತಕ ಹಾಜರಪಡಿಸಿದ್ದೇನೆಂದು ಹೇಳುತ್ತಾನೆ. ನಿಪಿ.8 ವೇತನ ಪ್ರಮಾಣ ಪತ್ರ ಅಲ್ಲ, ಕೇವಲ ಈ ಕೇಸಿಗೋಸ್ಕರ ಸೃಷ್ಟಿ ಮಾಡಿದ್ದು ಅಂದರೆ ಸರಿಯಲ್ಲ. ನಮ್ಮ ತಾಯಿ ನಗದಾಗಿ ವೇತನ ಪಡೆಯುತ್ತಿದ್ದರು. ನನ್ನ ತಾಯಿ ವೇತನ ಪಡೆದುಕೊಂಡ ಬಗ್ಗೆ ರಜಿಸ್ಟರ್ದ ಪ್ರತಿ ಹಾಜರಪಡಿಸಿಲ್ಲ. ನಮ್ಮ ತಾಯಿ ಶಾಲೆಯಲ್ಲಿ ಯಾವಾಗ ನೇಮಕಗೊಂಡಿದ್ದಾರೆಂದು ನೇಮಕಾತಿ ಆದೇಶ ಹಾಜರಪಡಿಸಿಲ್ಲ. ನಿಪಿ.9 ರಲ್ಲಿ ಕೆಲವೊಂದು ತಿಂಗಳಲ್ಲಿ ನಮ್ಮ ತಾಯಿ ಹೆಸರು ಇಲ್ಲ ಅಂದರೆ ಸರಿಯಲ್ಲ. ಅದು ಸೃಷ್ಟಿ ಅಂದರೆ ಸರಿಯಲ್ಲ. ಪರಿಹಾರಗೋಸ್ಕರ ನಾನು ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರಪಡಿಸಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಾಯಿಯ ಸ್ವ-ಉದ್ಯೋಗಿಗಳು ವಿಮೆ ಪಾಲಿಸಿ ಕೊಟ್ಟಿದ್ದಾರೆ.

This is a True Copy of the Court Records Online. Authenticated @ districts.ecourtsindia.com/cnr/KADW200047172023/truecopy/order-4.pdf

www.ecourtsindia.com



**MVC 622-23** **PW : 1**

ನಮ್ಮ ಕಸ್ಟಡಿಯಲ್ಲಿರುವ ವಿಮೆ ಪ್ರತಿ ಹಾಗೂ ಡಿ ಎಲ್ ನ್ನು ಹಾಜರಪಡಿಸಲು ತೊಂದರೆ ಇಲ್ಲ. ಸಹ - ಪ್ರಯಾಣಿಕರಿಗೆ ಸಂಬಂಧಪಟ್ಟಂತೆ ಪಾಲಿಸಿಯಲ್ಲಿ ಕವರ ಇಲ್ಲ ಅಂದರೆ ಸರಿಯಲ್ಲ. ಮೃತ ವಾರಸುದಾರರು ಎಂದು ತೋರಿಸಲು ವಾರಸಾ ಪ್ರಮಾಣ ಪತ್ರ ಹಾಜರಪಡಿಸಿಲ್ಲ. ನಾವು ಮೃತ ಪ್ರೇಮಲತಾ ರವರ ವಾರಸುದಾರರೆಂದು ಯಾವುದೇ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ನಾನು ಬಿ ಟೆಕ್ ಸಿವಿಲ್ ಇಂಜಿನಿಯರ ವ್ಯಾಸಂಗ ಮಾಡುತ್ತಿದ್ದೇನೆ. ನಾನು ಕಾಲೇಜದವರು ಕೊಟ್ಟ Bonafide certificate ಹಾಜರಪಡಿಸಿದ್ದೇನೆ. ಅಂತಿಮ ವ್ಯಾಸಂಗ ಆಗುವವರೆಗೂ ಯಾವುದೇ ದಾಖಲೆ ಕೊಡುವುದಿಲ್ಲ. ಹಣ ಕಟ್ಟಿದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನನ್ನ ತಾಯಿಯ ಮೇಲೆ ನಾವು ಅವಲಂಬನೆಯಾಗಿಲ್ಲ ಅಂದರೆ ಸರಿಯಲ್ಲ. ವಾಹನದ ಚಾಲಕನು ವಿಮೆ ಶರತ್ತುಗಳನ್ನು ಉಲ್ಲಂಘನೆ ಮಾಡಿದ್ದರಿಂದ ಪರಿಹಾರ ಪಡೆಯಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ತಾಯಿಯ ಅರ್ಜಿ ಪ್ಯಾರಾ ನಂಃ 4 ರಲ್ಲಿ ಹೇಳಿರುವಂತೆ ಸೂಕ್ತ ದಾಖಲೆಗಳನ್ನು ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಖಾಯಂ ನೋಂದಣಿಯಾಗದೇ ರಸ್ತೆ ಮೇಲೆ ವಾಹನವನ್ನು ಓಡಿಸಿರುವುದರಿಂದ ನಾವು ಪರಿಹಾರ ಪಡೆಯಲು ಅರ್ಹರು ಅಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

This is a True Copy of the Court Records Online. Authenticated @ districts.ecourtsindia.com/cnr/KADW200047172023/truecopy/order-4.pdf